(ಇಂದು ದಿನಾಂಕ 30-11-2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಎಚ್.ಎಸ್.ಎಸ್. ವಕೀಲರಿಂದಃ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಫಿರ್ಯಾದಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ**

ವಿದ್ಯಾರ್ಥಿಗಳ ಪರ ಹೋರಾಟ ಮಾಡಲು ನಾನು ಜಿಲ್ಲಾ ವಿದಾರ್ಥಿ ಒಕ್ಕೂಟವನ್ನು ಸ್ಥಾಪಿಸಿ ನೋಂದಾಯಿಸಿಕೊಂಡಿರುತ್ತೇನೆ. ಅದರ ನೋಂದಾಯಿತ ದಾಖಲಾತಿಯನ್ನು ಹಾಜರು ಮಾಡಿಲ್ಲ. ಜಿ.ಕೆ.

ರಾಮ್ ಬಿಲ್ಡಿಂಗ್‌ನಲ್ಲಿರುವ ಜಿಲ್ಲಾ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಿದ್ದೇನೆ. 2011 ನೇ ಸಾಲಿನಲ್ಲಿ ನೋಂದಾಯಿಸಿದ್ದೇನೆ. ಅದನ್ನು ರಿನಿವಲ್ ಮಾಡಲು ಕಚೇರಿಗೆ ಹೋದಾಗ ಒಮ್ಮೆ ಮಾಡಿದರೆ ಸಾಕು ಎಂದು ಹೇಳಿದ್ದರು. 2011 ರಿಂದ 2021 ರ ವರೆಗೆ ಯಾವುದೇ ಜಿಲ್ಲಾ ವಿದ್ಯಾರ್ಥಿ ಒಕ್ಕೂಟ ನೋಂದಣಿ ಆಗಿಲ್ಲ ಎಂದು ಈಗ ನನಗೆ ತೋರಿಸಿದ ದಾಖಲೆ ಪ್ರಕಾರ ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿ.ಪಿ. 10 ಎಂದು ಗುರುತಿಸಲಾಯಿತು. ಈಗ ನನಗೆ ನ್ಯಾಯಾಲಯದಲ್ಲಿ ಪ್ರದರ್ಶಿಸಿ ತೋರಿಸಲಾದ ವಿಡಿಯೋದಲ್ಲಿ ನನ್ನ ಜೊತೆ 2 ಮತ್ತು 3 ನೇ ಆರೋಪಿತರು ಇದ್ದಾರೆ. ನನ್ನದು ಯೂ-ಟ್ಯೂಬ್ ಚಾನೆಲ್ ಇದೆ. ಈಗ ಪ್ರದರ್ಶಿಸಿ ತೋರಿಸಲಾದ ವಿಡಿಯೋವನ್ನು ನಾನು ಅಪಲೋಡ್ ಮಾಡಿದ್ದೇನೆ. ಆದರೆ ವಿಡಿಯೋವನ್ನು ನಾನು ಮಾಡಿಲ್ಲ. ನನಗೆ ಬಂದ ವಿಡಿಯೋವನ್ನು ನಾನು ಯೂ-ಟ್ಯೂಬ್ ಚಾನೆಲ್‌ನಲ್ಲಿ ಅಪಲೋಡ್ ಮಾಡಿದ್ದೆ. "ತಾಯಿಗೆ ಕ್ಯಾನ್ಸರ್, ತಂದೆಗೆ ಪ್ಯಾರಾಲಿಸಿಸ್ 3 ತಿಂಗಳು ಸಂಬಳ ಇಲ್ಲ" ಎಂಬ ಶಿರೋನಾಮೆಯಡಿಯಲ್ಲಿ ಅದನ್ನು ಅಪಲೋಡ್ ಮಾಡಿದ್ದೇನೆ ಎಂದರೆ ಸರಿ. ಈ ಯೂ-ಟ್ಯೂಬ್‌ನಿಂದ ಫಿರ್ಯಾದಿ ಕಡೆಯವರು ಡೌನಲೋಡ್ ಮಾಡುವಾಗ 521 ಜನ subscriber ಇದ್ದರು ಎಂದರೆ ಸರಿ. ಸದರಿ 2 ವಿಡಿಯೋ ಕ್ಲಿಪ್ಪಿಂಗ್‌ಗಳನ್ನು ನಿ.ಪಿ. 1(ಬಿ) ಮತ್ತು 1(ಸಿ) ಎಂದು ಗುರುತಿಸಲಾಯಿತು. ನನಗೆ ಈ ಕೇಸಿನಲ್ಲಿ ಸಮನ್ಸ ಬಂದಾಗ ದೂರಿನ ಪ್ರತಿ ಸಿಕ್ಕಿರುವುದಿಲ್ಲ. ಈ ಕೇಸಿನ ಸಮನ್ಸ ಬಂದ ನಂತರ ನನ್ನ ವಕೀಲರ ಮೂಲಕ ದೂರಿನ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ಫಿರ್ಯಾದಿಯಲ್ಲಿ ಪುಟ ನಂ.2 ರಿಂದ 4 ನೇ ಪುಟದವರೆಗೆ ಕನ್ನಡದಲ್ಲಿ ಬರೆದಿರುವ ಸಂಗತಿಗಳು ನಾನು ಮತ್ತು ಇತರೇ ಆರೋಪಿತರು ಯೂ-ಟ್ಯೂಬ್‌ನಲ್ಲಿ ಹೇಳಿರುವ ಸಂಗತಿಗಳಾಗಿರುತ್ತವೆ ಎಂದರೆ ಸರಿ. ಜನಸಾಮಾನ್ಯರ ಪರವಾಗಿ ಹೋರಾಟ ಮಾಡಲು ನನ್ನ ಸಂಘಟನೆ ಇದೆ. ಅದು ಜಿಲ್ಲಾ ವಿದ್ಯಾರ್ಥಿ ಒಕ್ಕೂಟ ಆಗಿರುತ್ತದೆ. ವಿದ್ಯಾರ್ಥಿಗಳನ್ನು ಬಿಟ್ಟು ಬೇರೆ ಜನಸಾಮಾನ್ಯರ ಪರವಾಗಿ ಹೋರಾಟ ಮಾಡಲು ಪ್ರತ್ಯೇಕ ಸಂಘಟನೆ ಮಾಡಿಲ್ಲ. ನಾನು ಬಿ.ಎ. ಪದವೀಧರ ಮತ್ತು ಐ.ಟಿ.ಐ. ಮಾಡಿರುತ್ತೇನೆ. ಅದರ ಪ್ರಮಾಣಪತ್ರಗಳನ್ನು ಹಾಜರು ಮಾಡಬಹುದು. ನಾನು

ಈ ವಿಡಿಯೋವನ್ನು ಅಪಲೋಡ ಮಾಡುವಾಗ ನಾನು ವಿದ್ಯಾರ್ಥಿಯಾಗಿರಲಿಲ್ಲ. ಕೊನೆಯಬಾರಿ ನಾನು ವಿದ್ಯಾರ್ಥಿಯಾಗಿರುವುದು 2004 ರಲ್ಲಿ. ನಾನು ವಿದ್ಯಾರ್ಥಿ ಸಂಘದ ನಾಯಕ ಹಾಗೂ ವಿದ್ಯಾರ್ಥಿಗಳ ಪರವಾಗಿ ಹೋರಾಟ ಮಾಡುತ್ತಿದ್ದೇನೆ ಎಂದು ಸಂಬಂಧಪಟ್ಟ ಶಿಕ್ಷಣ ಇಲಾಖೆಗಳಿಗೆ ಹಾಗೂ ಯುನಿವರ್ಸಿಟಿಗೆ ಮಾಹಿತಿ ಕೊಟ್ಟಿರುತ್ತೇನೆ. ಅದರ ಬಗ್ಗೆ ದಾಖಲೆ ಇರಬಹುದು. 2 ಮತ್ತು 3 ನೇ ಆರೋಪಿತರು ನನ್ನ ಸಂಬಂಧಿಕರಲ್ಲ ಹಾಗೂ ವಿದ್ಯಾರ್ಥಿ ಸಂಘದವರಲ್ಲ. ವಿಡಿಯೋದಲ್ಲಿ ಮಾತನಾಡುವಾಗ ನಾನು ಮಾಸ್ಕ್ ಧರಿಸಿದ್ದೆ ಎಂದರೆ ಸರಿ. ಆ ಸಂದರ್ಭದಲ್ಲಿ ಕೊರೊನಾ ಮುಗಿದಿತ್ತು. ನಾನು ಕೊರೊನಾ ರೋಗಿಗೆ ಬಿಡುಗಡೆ ಮಾಡಲು ಹೋಗಿದ್ದು ಆ ಕಾರಣ ಆಸ್ಪತ್ರೆಗೆ ಹೋಗಲು ಯಾವುದೇ ಅನುಮತಿ ಪಡೆದಿಲ್ಲ. ಈಗ ಪ್ರದರ್ಶಿಸಿ ತೋರಿಸಲಾದ 2 ವಿಡಿಯೋ ಕ್ಲಿಪ್‌ಗಳು ನನ್ನ ಯೂ-ಟ್ಯೂಬ್‌ನಲ್ಲಿ ಅಪಲೋಡ ಮಾಡಲಾಗಿದೆ. ಸದರಿ 2 ವಿಡಿಯೋ ಕ್ಲಿಪ್‌ಗಳನ್ನು 1 ನೇ ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಪೆನ್ ಡ್ರೈವನ್ನು ನಿ.ಪಿ.11 ಮತ್ತು 2 ವಿಡಿಯೋ ಕ್ಲಿಪ್‌ಗಳನ್ನು ನಿ.ಪಿ.11(ಎ) ಮತ್ತು 11(ಬಿ) ಎಂದು ಗುರುತಿಸಲಾಯಿತು. ಅದರಲ್ಲಿರುವ 2 ನೇ ವಿಡಿಯೋ ಕ್ಲಿಪ್‌ನಲ್ಲಿ ನಾನು ಫಿರ್ಯಾದಿ ಬಗ್ಗೆ ಪ್ರಶ್ನೆ ಮಾಡುತ್ತಿದ್ದೇನೆ ಎಂದರೆ ಸರಿ. ಈಗ ಪ್ರದರ್ಶಿಸಿ ತೋರಿಸಲಾದ 1 ನೇ ವಿಡಿಯೋ ಕ್ಲಿಪ್ಪಿಂಗ್‌ನಲ್ಲಿ ನಾನು ರಸ್ತೆಯಲ್ಲಿ ಒಬ್ಬರಿಗೆ ದಬಾಯಿಸುತ್ತಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಹೂವು ಮಾರುವವರ ಬಳಿ ಮತ್ತು ಕಬ್ಬು ಮಾರುವವರ ಬಳಿ ಅವರು 1,000-00, 2,000-00 ರೂಪಾಯಿ ಪಡೆದುಕೊಳ್ಳುತ್ತಿದ್ದುದರಿಂದ ದಬಾಯಿಸುತ್ತಿದ್ದೆ ಎನ್ನುವರು. ಕಾನೂನನ್ನು ಕೈಗೆತ್ತಿಕೊಳ್ಳಲು ನನಗೆ ಯಾರೂ ಅನುಮತಿ ಪತ್ರ ಕೊಟ್ಟಿಲ್ಲ. ಕಾರವಾರದಲ್ಲಿ ನಡೆಯುವ ಎಲ್ಲಾ ಘಟನಾವಳಿಗೆ ನಾನು ದಂಡಾಧಿಪತಿಯಲ್ಲ. ನಾನು ಕಾನೂನಿಗಿಂತ ಮಿಗಿಲು ಅಲ್ಲ ಎಂದರೆ ಸರಿ. ಹೆಚ್ಚಿನ ಆಕರಣೆ ಭರಣ ಮಾಡಿಕೊಳ್ಳುತ್ತಿದ್ದ ರಾಮಾ ನಾಯ್ಕ ಎನ್ನುವವರಿಗೆ ನಾನು ಹೂ ಮಾಲೆ ಹಾಕಿದ್ದೆ ಎಂದರೆ ಸರಿ. ಅವರು ಒಳ್ಳೆಯದು ಮಾಡಿದ್ದಾರೆ ಎಂದು ಹೇಳಿ ಹೂ ಮಾಲೆ ಹಾಕಿದ್ದೆ. ಹೆಚ್ಚಿನ ದರ ತೆಗೆದುಕೊಳ್ಳುವುದು ಕೆಟ್ಟ ಕೆಲಸ. ಇನ್ನು ಮುಂದೆ ಹಾಗೆ ಮಾಡಬಾರದು ಎಂದು ನಾನು ಹೂಮಾಲೆ ಹಾಕಿದ್ದೆ. ಅವರು ಪಾಠ

ಕಲಿಯಲು ಎಂದು ಹೂಮಾಲೆ ಹಾಕಿದ್ದೆ. ಹೆಚ್ಚಿನ ದರ ತಗೆದುಕೊಳ್ಳುವುದಕ್ಕೆ ಅಲ್ಲಿ ಪಕ್ಕದಲ್ಲಿದ್ದ ಮುನ್ಸಿಪಾಲ್ಟಿಗೆ ದೂರು ಕೊಡಲು ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರಿದು ದೂರು ಕೊಟ್ಟಿದ್ದೆ, ಅದರ ಬಗ್ಗೆ ಕಾಗದಪತ್ರ ಇದೆ ಎನ್ನುವರು. ಯಾವುದಾದರೂ ವ್ಯಕ್ತಿ ತಪ್ಪು ಮಾಡಿದರೆ ಸಂಬಂಧಪಟ್ಟ ಇಲಾಖೆಗೆ ದೂರು ಕೊಟ್ಟು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ. ರಾಮಾ ನಾಯ್ಕರವರಿಗೆ ಹೂಮಾಲೆ ಹಾಕಲು ಮುನ್ಸಿಪಾಲ್ಟಿಯವರು ನನಗೆ ಒಪ್ಪಿಗೆ ಕೊಟ್ಟಿರುವುದಿಲ್ಲ. ಒಬ್ಬ ವ್ಯಕ್ತಿ ತಪ್ಪು ಮಾಡಿದರೆ ಆ ತಪ್ಪನ್ನು ಬಿಂಬಿಸಿ ಹೂಮಾಲೆ ಹಾಕಿದರೆ ಅದು ತಪ್ಪು ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಅನಿಸುವುದಿಲ್ಲ ಎನ್ನುವರು. ಸಮಾಜದ ಓರೆಕೋರೆಗಳನ್ನು ತಿದ್ದಲು ನಾನು ಹೊರಟಾಗ ಅಲ್ಲಿ ನಡೆಯುವ ಎಲ್ಲಾ ಘಟನಾವಳಿಗಳನ್ನು ಚಿತ್ರೀಕರಣ ಮಾಡಲು ಕ್ಯಾಮರಾಮೆನ್ ಒಮ್ಮೊಮ್ಮೆ ಬರುತ್ತಾರೆ, ಕೆಲವೊಮ್ಮೆ ನಾನೇ ಮಾಡುತ್ತೇನೆ. ಕ್ಯಾಮರಾಮೆನ್ ಅವರನ್ನು ನಾನೇ ನೇಮಕ ಮಾಡುತ್ತೇನೆ. ನನ್ನ ಉದ್ದೇಶ ಸಮಾಜ ಸುಧಾರಿಸಲೋ ಅಥವಾ ಪ್ರಚಾರಕ್ಕೋ ಎಂಬ ಪ್ರಶ್ನೆಗೆ ಸಾಕ್ಷಿ ಸಮಾಜ ಸುಧಾರಿಸಲು ಎನ್ನುವರು. ಎಲ್ಲಾ ವ್ಯಕ್ತಿಗಳಿಗೆ ಅವರದ್ದೇ ಆದ ಘನತೆ ಗೌರವ ಇರುತ್ತದೆ ಎಂದರೆ ಸರಿ. ಸಮಾಜದಲ್ಲಿ ಘನತೆ, ಗೌರವ ಮತ್ತು ಮಾನ ಕಟ್ಟಿಕೊಂಡು ಬರಲು ಬಹಳಷ್ಟು ವರ್ಷಗಳು ಹಿಡಿಯುತ್ತವೆ ಎಂದರೆ ಸರಿ. ಅಂತಹ ಘನತೆ ಗೌರವವನ್ನು 2 ನಿಮಿಷದಲ್ಲಿ ಹಾಳು ಮಾಡಲು ಬರುತ್ತದೆ ಎಂದರೆ ಸರಿ. ಫಿರ್ಯಾದಿ ಮೂಲತಃ ಕಾರವಾರದವರು ಎಂದರೆ ಸರಿ. ವಿಡಿಯೋ ಮಾಡುವ ಸಂದರ್ಭದಲ್ಲಿ ಅವರು District Surgeon ಆಗಿ ಕೆಲಸ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ Superintendent ಆಗಿಯೂ ಕೆಲಸ ಮಾಡುತ್ತಿದ್ದರು ಎನ್ನುವರು. ಫಿರ್ಯಾದಿ MBBS ಮತ್ತು DGO ಪದವೀಧರ ಎಂಬ ಪ್ರಶ್ನೆಗೆ ಸಾಕ್ಷಿ MBBS ಮಾಡಿದ್ದು ಗೊತ್ತಿದೆ ಎನ್ನುವರು. ಮೇಲಿನ ವಿಡಿಯೋವನ್ನು ಅಪಲೋಡ ಮಾಡುವಾಗ ಫಿರ್ಯಾದಿ ಸುಮಾರು 26 ವರ್ಷ ಸೇವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ಬಹಳ ವರ್ಷಗಳಿಂದ ಇರುವುದು ನೋಡಿದ್ದೆ. ಫಿರ್ಯಾದಿಯವರು ಅಂಗಡಿ, ಚಿತ್ತಾಕುಲ್, ಹಳಗಾ, ಚೆಂಡಿಯಾ, ಸಿದ್ಧರ್ ಮತ್ತು ದೇವಳಮಕ್ಕಿಗಳಲ್ಲಿ ತಾಲೂಕಾ ಹೆಲ್ತ್ ಆಫೀಸರ್ ಆಗಿ ಕೆಲಸ ಮಾಡಿದ್ದಾರೆ ಎಂದರೆ

ಗೊತ್ತಿಲ್ಲ. ಅವರು ಜಿಲ್ಲಾ ಮಲೇರಿಯಾ ಇನಚಾರ್ಜ ಆಗಿ ಮತ್ತು DHO incharge ಆಗಿ ಕೆಲಸ ಮಾಡಿರುವುದು ನನಗೆ ಗೊತ್ತಿಲ್ಲ. ಫಿರ್ಯಾದಿ ಸ್ತ್ರಿರೋಗ ತಜ್ಞರು ಎಂದು ಗೊತ್ತಿದೆ. ಅವರು ಸ್ತ್ರೀರೋಗ ತಜ್ಞರಾಗಿ ಹಲವಾರು ಶಸ್ತ್ರಚಿಕಿತ್ಸೆಗಳು ಮಾಡಿ ಮತ್ತು ಅನೇಕ ಚಿಕಿತ್ಸೆಗಳನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನನ್ನ ಅಕ್ಕನ ಮಗನನ್ನು ಸಾಯಿಸಿರುತ್ತಾರೆ ಎನ್ನುವರು. 2012 ನೇ ಇಸವಿಯಲ್ಲಿ ನನ್ನ ಅಕ್ಕ ಉಷಾ ಎನ್ನುವವರ ಮಗನನ್ನು ಸಾಯಿಸಿದ್ದಾರೆ. ಈ ಕುರಿತು ಅವರ ವಿರುದ್ಧ ದೂರು ಕೊಟ್ಟಿಲ್ಲ. ಅದರ ಬಗ್ಗೆ ತನಿಖೆ ಆಗಲು ಆಗ್ರಹ ಮಾಡಿಲ್ಲ. ಫಿರ್ಯಾದಿಯ ಹೆಂಡತಿ Ex-councilor ಆಗಿ ಕೆಲಸ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಮಗ ಕಿಶನ್ ಕುಡ್ತಾಲಕರ್ MBBS ಮಾಡಿದ್ದಾರೆ. ಅವರ ನೌಕರಿಯನ್ನು ಹೊರತುಪಡಿಸಿ ಅನೇಕ ಸಮಾಜಸೇವೆಯನ್ನು ಫಿರ್ಯಾದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ಒಬ್ಬ ವ್ಯಕ್ತಿಯ ವಿರುದ್ಧ ಮಾತನಾಡುವಾಗ ಸಾರ್ವಜನಿಕ ಒಳಿತಿಗಾಗಿ ಮತ್ತು ಸದುದ್ದೇಶ ಇಟ್ಟುಕೊಂಡು ಮಾತನಾಡಬೇಕಾಗುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಅವರು ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದು ಮಾತನಾಡಬೇಕಾಗುತ್ತದೆ, ಕೆಟ್ಟ ಕೆಲಸ ಮಾತನಾಡಿದರೆ ಕೆಟ್ಟದಾಗಿ ಮಾತನಾಡಬೇಕಾಗುತ್ತದೆ ಎನ್ನುವರು. ನಾನು ಕೆಟ್ಟವರಿಗೆ ಕೆಟ್ಟ ಉದ್ದೇಶ ಹಾಗೂ ಒಳ್ಳೆಯವರಿಗೆ ಒಳ್ಳೆಯ ಉದ್ದೇಶ ಇಟ್ಟುಕೊಂಡಿರುತ್ತೇನೆ ಎನ್ನುವರು. ಯಾವುದಾದರೂ ಸರಕಾರ ಆಗಲೀ, ಪ್ರಾಧಿಕಾರ ಆಗಲೀ ಫಿರ್ಯಾದಿಯವರು ಕೆಟ್ಟವರು ಎಂದು ತೀರ್ಪು ಕೊಟ್ಟಿದ್ದಾರೆಯೋ ಎಂದು ನನಗೆ ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರು ನನ್ನ ಬಳಿ ದೂರಿಕೊಂಡ ನಂತರ ನಾನು ಫಿರ್ಯಾದಿಯ ವಿರುದ್ಧ ಇಲಾಖೆಗೆ ದೂರು ಕೊಟ್ಟಿರುತ್ತೇನೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಆದರೆ ವಕೀಲರಿಗೆ ಕೊಟ್ಟಿರುತ್ತೇನೆ. ನಾನು ಅರ್ಜಿಯನ್ನು ಕಮೀಷನರರವರಿಗೆ, ಮುಖ್ಯಮಂತ್ರಿಯವರಿಗೆ, ನಿರ್ದೇಶಕರಿಗೆ, ಡಿ.ಎಂ.ಓ.ರವರಿಗೆ ಮತ್ತು ಪ್ರಿನ್ಸಿಪಾಲ್ ಸೆಕ್ರೆಟರಿ ಇವರಿಗೆ ಕೊಟ್ಟಿರುತ್ತೇನೆ. ಹಾಗೇ 8 ಬಾರಿ ಬೆಂಗಳೂರಿಗೆ ಹೋಗಿ ವಿಚಾರಿಸಿದ್ದು ಏನೂ ಆಗಿರುವುದಿಲ್ಲ. ಜಾಗೃತಿ ದಳದಲ್ಲಿ ವಿಚಾರಣೆಯಾಗಿದ್ದು, ಬೇರೆ ಅರ್ಜಿಗಳು ಏನಾಯಿತು ಎಂದು ನನಗೆ

ಗೊತ್ತಿಲ್ಲ. ನಾನು ಇಲಾಖೆಗಳಿಗೆ ಅರ್ಜಿ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1(ಬಿ) ಮತ್ತು 1(ಸಿ) ಯಲ್ಲಿ ದೂರು ಮಾಡಿದ 2 ಮತ್ತು 3 ನೇ ಆರೋಪಿತರಿಗೆ ಈವರೆಗೆ ನ್ಯಾಯಾ ಸಿಕ್ಕಿರುವುದಿಲ್ಲ. ಯೂ-ಟೂಬ್‌ನಲ್ಲಿ ವಿಡಿಯೋಗಳನ್ನು ಅಪಲೋಡ ಮಾಡಿದರೆ ನ್ಯಾಯ ಸಿಗುತ್ತದೆಯೋ ಎಂಬ ಪ್ರಶ್ನೆಗೆ ಸಾಕ್ಷಿ ನ್ಯಾಯ ಸಿಗಲಿ ಎಂದು ಅಪಲೋಡ್ ಮಾಡಿದ್ದೆ ಎನ್ನುವರು. ನಿ.ಪಿ.1(ಬಿ) ಮತ್ತು 1(ಸಿ) ವಿಡಿಯೋವನ್ನು ಎಷ್ಟು ಜನರು ವೀಕ್ಷಿಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನಿ.ಪಿ.1(ಬಿ) ಮತ್ತು 1(ಸಿ) ವಿಡಿಯೋವನ್ನು ಯೂ-ಟೂಬ್‌ನಲ್ಲಿ ಅಪಲೋಡ ಮಾಡುವಾಗ ನಾನು ಫಿರ್ಯಾದಿ ಬಗ್ಗೆ ಯಾವುದೇ ಕಾಳಜಿ ತೆಗೆದುಕೊಂಡಿಲ್ಲ.

2 ಮತ್ತು 3 ನೇ ಆರೋಪಿತರು 2020 ರಲ್ಲಿ ಸೆಕ್ಯುರಿಟಿ ಗಾರ್ಡ ಆಗಿ out sourcing ಆಧಾರದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ಅವರು ಆಸ್ಪತ್ರೆಯಲ್ಲಿ ಕೆಲಸ ಮಾಡುವುದು ಗೊತ್ತಿತ್ತು. ಅವರು ಆಸ್ಪತ್ರೆಯಲ್ಲಿ ಸೆಕ್ಯುರಿಟಿ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2 ಮತ್ತು 3 ನೇ ಆರೋಪಿತರು ಯುನಿವರ್ಸಲ್ ಏಜೆನ್ಸಿ ಎಂಬ ಸಂಸ್ಥೆಯಡಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಹೊರಗುತ್ತಿಗೆ ಬಗ್ಗೆ ಗೊತ್ತಿದೆ. ಹೊರಗುತ್ತಿಗೆಯಲ್ಲಿ ಒಬ್ಬರನ್ನು ತೆಗೆದುಕೊಳ್ಳುವಾಗ ಇನ್ನೊಮ್ಮೆ ಅವರನ್ನು ತೆಗೆದುಕೊಳ್ಳಬಹುದೋ ಅಥವಾ ಬಿಡಬಹುದೋ ಎಂದು ನನಗೆ ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರು ಒಂದುವೇಳೆ ವೈದ್ಯಕೀಯ ಇಲಾಖೆಯಲ್ಲಿ ಅಥವಾ ಆರೋಗ್ಯ ಇಲಾಖೆಯಲ್ಲಿ ನೇಮಕವಾದರೆ ಆಯಾಯ ಇಲಾಖೆಯವರು ಅವರಿಗೆ ಪೇಮೆಂಟ್ ಮಾಡುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಆರೋಪಿತರ ಜೊತೆ ನಾನು ವಿಡಿಯೋದಲ್ಲಿ ಮಾತನಾಡುವಾಗ ಅವರು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಆಗಿದ್ದಾರೋ ಅಥವಾ ಅವರು ಇಲಾಖೆಯಿಂದ ನೇಮಕ ಆಗಿದ್ದಾರೋ ಎಂದು ನಾನು ತಿಳಿದುಕೊಂಡಿಲ್ಲ. ಹೊರಗುತ್ತಿಗೆ ಆಧಾರದಲ್ಲಿ ನೇಮಕ ಆದರೆ ಸಂಬಳವನ್ನು ಹೊರಗುತ್ತಿಗೆ ಮುಖ್ಯಸ್ಥರು ಕೊಡಬೇಕಾಗುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಇಲಾಖೆಯವರು ಹಣ ಬಿಡುಗಡೆ ಮಾಡಿದರೆ ಹೊರಗುತ್ತಿಗೆಯವರು ಕೊಡುತ್ತಾರೆ

ಎನ್ನುವರು. ಒಂದುವೇಳೆ 2 ಮತ್ತು 3 ನೇ ಆರೋಪಿತರು ಇಲಾಖೆಯಿಂದ ನೇಮಿಸಲ್ಪಟ್ಟಲ್ಲಿ ಅವರಿಗೆ ಸಂಬಳವನ್ನು ಹೊರಗುತ್ತಿಗೆಯವರು ಕೊಡಬೇಕಾಗುತ್ತದೆ. ಅವರಿಗೆ ಹಣ ಬಿಡುಗಡೆಯನ್ನು ಆಸ್ಪತ್ರೆಯ Superintendent ಅಂದರೆ ಫಿರ್ಯಾದಿ ಮಾಡಬೇಕಾಗುತ್ತದೆ. ಹಣ ಬಿಡುಗಡೆಯನ್ನು ಫಿರ್ಯಾದಿ ಮಾಡಬೇಕು ಎನ್ನುವ ಬಗ್ಗೆ ನಾನು ಕಾಗದಪತ್ರ ನೋಡಿರುತ್ತೇನೆ. ಅದಕ್ಕೆ RTI ನಲ್ಲಿ ಅರ್ಜಿ ಸಲ್ಲಿಸಿ ತರಿಸಬಹುದು. ಮಾರ್ಚ 2021 ರಲ್ಲಿ ಹೊರಗುತ್ತಿಗೆ ಕೆಲಸಕ್ಕೆ ಹೊಸ ಟೆಂಡರ್ ಕರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. 2021 ರ ಟೆಂಡರ್ ಪ್ರಕಾರ skyline enterprises, Ankola, Mahalasa Trade Links, Ankola, Madhura Agency, Kumta ಮತ್ತು Deeksha Consultancy Agency ರವರಿಗೆ ಕೊಡಲಾಗಿತ್ತು ಎಂದರೆ ಇರಬಹುದು. 2 ಮತ್ತು 3 ನೇ ಆರೋಪಿತರು ಮೇಲೆ ಹೇಳಿದ ಯಾವುದೇ ನಾಲ್ಕೂ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರು ಹೊರಗುತ್ತಿಗೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಅಥವಾ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ಕಾಗದಪತ್ರ ನೋಡಿರುವುದಿಲ್ಲ. ಸಂಬಳ ಕೊಡುವವವರು ಯಾರು ಎಂದು ನಾನು ಡೈರೆಕ್ಟರ್ ಗಜಾನನ ನಾಯ್ಕ ಇವರಿಗೆ ಪೋನ್ ಮಾಡಿದ್ದು ಅವರು ಕೊರೊನಾ ಕಾಯಿಲೆಯಿಂದ ಬಳಲುತ್ತಿದ್ದು ಅವರು ಫಿರ್ಯಾದಿಯವರ ಬಳಿ ಕೇಳಲು ಹೇಳಿದ್ದರು. ಅದರ ನಂತರ ನಾನು ಗಜಾನನ ನಾಯ್ಕರವರ ಬಳಿ ಯಾರು ಸಂಬಳ ಕೊಡುವವರು ಎಂದು ದಾಖಲಾತಿ ಪಡೆದಿಲ್ಲ. 2 ಮತ್ತು 3 ನೇ ಆರೋಪಿತರು ಯಾವತ್ತೂ ಫಿರ್ಯಾದಿ ಕೆಳಗಡೆ ಕೆಲಸ ಮಾಡುವ ಸಿಬ್ಬಂದಿಗಳಲ್ಲ ಹಾಗೂ ಫಿರ್ಯಾದಿಯವರಿಗೆ ಸಂಬಳ ಕೊಡುವ ಅಧಿಕಾರಿಯಾಗಿರಲಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ